# ದ್ವಿತೀಯ ಪಿಯುಸಿ ಐಚ್ಛಿಕ ಕನ್ನಡ (16) ಮಾದರಿ ಪ್ರಶ್ನೆಪತ್ರಿಕೆಯ ನೀಲಿನಕ್ಷೆ-2023-24

| ಕ್ರ.ಸಂ | ಪಠ್ಯಗಳು | ಬೋಧನಾಅವಧಿ | ನಿಗಧಿಪಡಿಸಿದಅಂಕಗಳು | ಜ್ಞಾನ | | | | ಗ್ರಹಿಕೆ | | | | ಅಭಿವ್ಯಕ್ತಿ | | | | ಕೌಶಲ್ಯ | | | |
|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 1 | 2 | 3 | 4 | 1 | 2 | 3 | 4 | 1 | 2 | 3 | 4 |
| 01 | ಪೊಸಯಿಸದಳಾಕೆನಾಟ್ಯಾಗಮಮಂ - ಚಂಪೂ | **10** | **09** | | **01** | | | | | | **01** | | | **01** | | | | | |
| 02 | ಸೌಜನ್ಯವಿದೂರನಾದೆನ್ – ಚಂಪೂ | **10** | **10** | **01** | **01** | | | | | | **01** | | | **01** | | | | | |
| 03 | ರಗಳೆ | **07** | **06** | **01** | **01** | | | | | | | | | **01** | | | | | |
| 04 | ಷಟ್ಪದಿ | **10** | **10** | **01** | **01** | | | | | | **01** | | | **01** | | | | | |
| 05 | ಶತಕ | **08** | **09** | | **01** | | | | | | **01** | | | **01** | | | | | |
| 06 | ತ್ರಿಪದಿ | **08** | **08** | **01** | | | | | | | **01** | | | **01** | | | | | |
| 07 | ಸಾಂಗತ್ಯ | **07** | **07** | **01** | **01** | | | | | | **01** | | | | | | | | |
| 08 | ನಾಗಿಯಕಥೆ | **10** | **13** | **01** | **02** | | | | | | **02** | | | | | | | | |
| 09 | ಜಲಗಾರ | **24** | **27** | **03** | **03** | | | | | | **02** | | | **03** | | **01** | | | |
| 10 | ಅಲಂಕಾರ | **08** | **08** | | | | | | | | | | | | | | | | **02** |
| 11 | ಛಂದಸ್ಸು | **08** | **08** | | | | | | | | | | | | | | | | **02** |
| 12 | ವ್ಯಾಕರಣ | **10** | **10** | **10** | | | | | | | | | | | | | | | |
| | | **120** | **125** | | | | | | | | | | | | | | | | |
| ಒಟ್ಟುಪ್ರಶ್ನೆಗಳು | | | | **19** | **11** | | | | | | **10** | | | **09** | | **01** | | | **04** |
| ಒಟ್ಟುಅಂಕಗಳು | | | | **19** | **22** | | | | | | **40** | | | **27** | | **01** | | | **16** |
| ಉತ್ತರಿಸಬೇಕಾದಅಂಕಗಳು | | | | **19** | **14** | | | | | | **20** | | | **18** | | **01** | | | **08** |
| ಹೆಚ್ಚುವರಿಅಂಕಗಳು | | | | **-** | **08** | | | | | | **20** | | | **9** | | **-** | | | **08** |

| | |
|---|---|
| **ಒಟ್ಟುಪ್ರಶ್ನೆಗಳು** | **54** |
| **ಉತ್ತರಿಸಬೇಕಾದಪ್ರಶ್ನೆಗಳು** | **40** |
| **ಹೆಚ್ಚುವರಿಪ್ರಶ್ನೆಗಳು** | **14** |
| **ಒಟ್ಟುಅಂಕಗಳು** | **125** |
| **ಉತ್ತರಿಸಬೇಕಾದಅಂಕಗಳು** | **80** |
| **ಹೆಚ್ಚುವರಿಅಂಕಗಳು** | **45** |

**ಮಾದರಿ ಪ್ರಶ್ನೆಪತ್ರಿಕೆ**

**ವಿಷಯ– ಐಚ್ಛಿಕ ಕನ್ನಡ (16)**

**ಒಟ್ಟು ಪ್ರಶ್ನೆಗಳು – 54** **ದ್ವಿತೀಯ ಪಿಯುಸಿ** **ಒಟ್ಟು ಅಂಕಗಳು – 80**

**ಸಮಯ: 3.15 ನಿಮಿಷಗಳು**

---

**ಅ–ವಿಭಾಗ**

**I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ.** **1x5 = 5**

1. 'ಸೀರೆ ಬೇಕೆ ಸೀರೆ' ಎಂದವರು
   ಅ) ಅಂಗಡಿಯವ ಆ) ಸೀರೆಯವ ಇ) ಮಂಜುಗೌಡ ಈ) ತಾಯಿ
2. ಜಲಗಾರನ ಆರತಿ
   ಅ) ಕರ್ಪೂರ ಆ) ಹಣ್ಣು ಇ) ಪೊರಕೆ ಈ) ಮಡಕೆ
3. ರೈತ ಶಿವನನ್ನು ನೋಡಲು ಹೊರಟಿರುವುದು
   ಅ) ಕಾಡಿಗೆ ಆ) ಮನೆಗೆ ಇ) ಶಿವಗುಡಿಗೆ ಈ) ಊರಿಗೆ
4. ಕಿಲ್ಲೋನೆ ಹೀಗೆ ಸುರಿಯುತ್ತಿತ್ತು
   ಅ) ಬಿಟ್ಟು ಬಿಟ್ಟು ಆ) ಧಾರಾಕಾರ ಇ) ಜಿಟಿಜಿಟಿ ಈ) ಎಡೆಬಿಡದೆ
5. 'ದೇಗುಲದೊಳವಿತುಕೊಂಡಿಹನಂತೆ ಪರಶಿವನು! ಜಗವೆಲ್ಲ ದೇವನಿಹ ಗುಡಿಯಲ್ಲವೇ, ಗೆಳೆಯ?
   ಮತದ ಮದ್ಯವ ಕುಡಿದು ತಲೆಕಟ್ಟಿಹುದು ಮಂದಿ!'
   ಇಲ್ಲಿ ಜನರಿಗೆ ತಲೆಕೆಟ್ಟಿರುವುದು
   ಅ) ಮದ್ಯವನ್ನು ಕುಡಿದು ಆ) ಭಕ್ತಿಯನ್ನು ಮಾಡಿ ಇ) ದೇಗುಲದಲ್ಲಿ ದೇವರನ್ನು ಹುಡುಕಿ
   ಈ) ಜಗದಲ್ಲಿ ದೇವರನ್ನು ಕಾಣದೆ

**II. ಸರಿಯಾದ ಉತ್ತರವನ್ನು ಆಯ್ದು ಖಾಲಿಜಾಗ ಭರ್ತಿಮಾಡಿ** **1x5= 5**

6. ಅನಲ ಪದದ ಅರ್ಥ ____________
7. ವಿದ್ಯೆ ಪದದ ತದ್ಭವ ರೂಪ ___________
8. ಆಧಾರ ಪದದ ವಿರುದ್ಧ ಪದ ______________
9. ದ್ವಿರುಕ್ತಿಗೆ ಇದು ಉದಾಹರಣೆ ______________
10. 'ಸುರರೋಲಗ' ಪದದ ಬಿಡಿಸಿ ಬರೆವ ರೂಪ __________

**(ಬಿಜ್ಜೆ, ನೀರು, ಬೆಂಕಿ, ಒಂದೊಂದು, ಸುರರ+ಓಲಗ, ನಿರಾಧಾರ.)**

**III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ** **1x5= 5**

11. ಆನನ – ಬೇಡ
12. ಶಬರ – ಹೊತ್ತಿಗೆ
13. ಪುಸ್ತಕ – ವಿರುದ್ಧ
14. ಪರ – ಮುಖ, ವದನ
15. ನೆರೆ – ಪಕ್ಕ, ಮುಪ್ಪು

– ನೊರೆ, ಮುಪ್ಪು

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **1x 5= 5**

16. ಯಾರ ಬಾಣದಿಂದ ಹಂದಿ ನೆಲಕ್ಕೆ ಉರುಳಿತು?
17. ಮಡಕೆ ಯಾರ ಮೆಚ್ಚಿನ ವಾದ್ಯ?
18. ಪರುಷ ಮುಟ್ಟಲು ಯಾವುದು ಕನಕವಾಗುತ್ತದೆ?
19. ಹಸನಾಗಿ ದುಡಿದರೆ ಏನು ಸಿಗುತ್ತವೆ?
20. ಹೆಣ್ಣನ್ನು ಅಲ್ಲಗಳೆಯುವವರು ಯಾರು?

## ಆ–ವಿಭಾಗ

**V. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x4 = 8**

21. ಸಂಗೀತ ಪ್ರಪಂಚಕ್ಕೆ ಯಾವ ಯಾವ ವಂಶದ ರಾಜರು ಹಾಜರಿದ್ದರು?
22. ಮರಳಲಿಂಗವನ್ನು ಅರ್ಜುನನು ಹೇಗೆ ಪೂಜಿಸಿದನು?
23. ಗಿರಿಜೆಯ ಪ್ರಶ್ನೆಗೆ ಶಿವನು ಏನೆಂದು ಉತ್ತರಿಸಿದನು?
24. ಮಾಯೆಗೆ ಪರಮತತ್ವಜ್ಞಾನವಿಲ್ಲ ಎಂಬುದಕ್ಕೆ ಅಲ್ಲಮ ಕೊಡುವ ಉದಾಹರಣೆಗಳೇನು?
25. ಪರಮಾತ್ಮನು ಎಲ್ಲೆಲ್ಲಿ ಇರುವನು?
26. ಇಳಿವಯಸ್ಸಿನ ಹೆಂಡತಿಯನ್ನು ಹೇಗೆ ನೋಡಿಕೊಳ್ಳಬೇಕು?

**VI. ಕೆಳಗಿನ ಮೂರು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3x4 = 12**

27. ಪೊಸಯಿಸಿದಳಾಕೆ ನಾಟ್ಯಾಗಮಮಂ
28. ಓರ್ವನೆ ನಿಂದು ಕಾದಿದಯ್
29. ಮಡಕೆಯ ವಾದ್ಯಂ ಸಾಲ್ಗೆಂದೆನುತಿರೆ.
30. ಸಾವನಿತು ಬಂದಡೆ ಬರಲಿ ಬಿಡೆ.
31. ತರುಣಿಗೆ ಪತಿದೈವ
32. ಹಂದಿಯೊಂದೆಡೆಗೆ ಉಪಕಾರಿ.

**VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **4x2 = 8**

33. ಕಿರಾತನೇ ಸಾಕ್ಷಾತ್ ಶಿವನೆಂದಾಗ ಅರ್ಜುನನಲ್ಲಿ ಮೂಡಿದ ಭಾವನೆಗಳು ಯಾವುವು? ವಿವರಿಸಿ
34. ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ? ವಿವರಿಸಿ.
35. ಸರ್ವಜ್ಞನ ತ್ರಿಪದಿಗಳಲ್ಲಿ ಕಂಡುಬರುವ ಸಾರ್ವಕಾಲಿಕ ಮೌಲ್ಯಗಳನ್ನು ಸಂಗ್ರಹಿಸಿ ಬರೆಯಿರಿ.
36. ಸಂಚಿಯ ಹೊನ್ನಮ್ಮ ಹೆಣ್ಣಿನ ಬಗ್ಗೆ ಹೆಮ್ಮೆಪಡಲು ಕಾರಣವೇನು?

**VIII. ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ :** **4x1 = 4**

37. ರಸಭಾವಾಭಿನಯಂಗಳ್
ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ
ಪೊಸವೆ ಕರಣಂಗಳುಂ ನಿ
ಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ

38. ಆಡದೆ ಮಾಡುವನುತ್ತಮನಾಡಿತಾ
ಮಾಡುವ ಮಧ್ಯಮನೆನಿಪನು
ಆಡಿಯುಂ ಮಾಡದ ಮನುಜ ರಂಗೇಶ
ನಾಡವರರಿದು ಮೆಚ್ಚುವರೆ

## ಇ–ವಿಭಾಗ

**IX. ಕೆಳಗಿನ ಒಂದು ಪ್ರಶ್ನೆಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x1 = 2**

39. ಕವಿ ಊರನ್ನು ಹೇಗೆ ವರ್ಣಿಸುತ್ತಾರೆ ?
40. ತಂದೆ – ತಾಯಿ ನಾಗಿಯನ್ನು ಹೇಗೆ ಹುಡುಕಿದರು?

**X. ಕೆಳಗಿನ ಒಂದು ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **4x1 = 4**

41. ನಾಗಿಯ ಕಥೆ ಕವನದಲ್ಲಿಯ ಪ್ರಕೃತಿ ವರ್ಣನೆ ಕುರಿತು ಬರೆಯಿರಿ.
42. ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ದುರಂತ ಕಥೆಯೇ? ಚರ್ಚಿಸಿ.

## ಈ–ವಿಭಾಗ

**XI. ಕೆಳಗಿನ ಎರಡು ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ** **2x2 = 4**

43. ರೈತನ ಗೆಳೆಯರು ಯಾರು ?
44. ಭಾರತಾಂಬೆಯ ದುರ್ಗತಿಗೆ ಕಾರಣಗಳೇನು?
45. ಊರ ತೋಟಿ ಮತ್ತು ಜಗದ ತೋಟಿಗಳಾರು?

**XII. ಕೆಳಗಿನ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3x2 = 6**

46. ದೂರದಲ್ಲಿಯೇ ನಿಂತು ಕೈಮುಗಿದು ಬಾ
47. ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ?
48. ಶಿವನಗುಡಿಗೆ ಸೇರಿಸರು ಶಿವನಾದ ಎನ್ನ

**XIII. ಕೆಳಗಿನ ಒಂದು ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4 = 4**

49. ಭೂದೇವಿಯ ಉಷಃಕಾಲದ ಚಿತ್ರಣವನ್ನು ಚಿತ್ರಿಸಿ
50. ಕಾಯಕ ತತ್ವದ ಮಹತ್ವವನ್ನು ಜಲಗಾರ ನಾಟಕದ ಹಿನ್ನೆಲೆಯಲ್ಲಿ ಬರೆಯಿರಿ.

## ಉ–ವಿಭಾಗ

**XIV. ಕೆಳಗಿನ ಒಂದು ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ** **1x4 = 4**

51. ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ
ಸಾರದನಿತ್ಯತೆ ಮನದೊಳ್
ಬೇರೂಜಿದುದೀಗಳೆಂತಿದಂ ಕಡೆಗಣಿಪೆಂ.

52. ನಿಮ್ಮುವನಾಡಿಪ ಭಕ್ತನದಾವಂ
ನಿಮ್ಮಂ ಮೆಚ್ಚಿದ ಶರಣನದಾವಂ

**XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ** **1x4 = 4**

53. ಸೌದಾಮಿನಿವೊಲ್ ಭೋಂಕನೆ ಸುರ ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್

54. ಕೆಡೆ ಕೆಡೆಯೆಂದಾರ್ದೆಚ್ಚಂ
ಘುಡುಘಡಿಪ ಮಹಾವರಾಹನಂ ಕೂರ್ಗಣೆಯಿಂ

*–*–*–*–*